ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

26

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 11-12-202

## ವಿಧೇಯಕವನ್ನು ವಿಧಾನ ಪರಿಷತ್‌ನಲ್ಲಿ ತಡೆದ ಕಾಂಗ್ರೆಸ್ ಸಭಾಪತಿ ವಿರುದ್ಧ ರಾಜ್ಯಪಾಲರಿಗೆ ಬಿಜೆಪಿಯಿಂದ ದೂರು

# ಗೋ ಕಾಯಿದೆ ಅತಂತ್ರ

**ವಿಕ ಸುದ್ದಿಲೋಕ** ಬೆಂಗಳೂರು

ನಾಟಕೀಯವಾಗಿ ವಿಧಾನಸಭೆಯಲ್ಲಿ ಅಂಗೀಕಾರ ಪಡೆದಿದ್ದ ಗೋಹತ್ಯೆ ನಿಯಂತ್ರಣ ಮತ್ತು ಜಾನುವಾರು ರಕ್ಷಣೆ ವಿಧೇಯಕಕ್ಕೆ ಮೇಲ್ಮನೆಯಲ್ಲಿ ಅಷ್ಟೇ ನಾಟಕೀಯವಾಗಿ ತಾತ್ಕಾಲಿಕ ತಡೆ ಬಿದ್ದಿದೆ! ಈ ವಿಧೇಯಕವನ್ನು ಬಿಜೆಪಿ ಮಂಡಿಸಲು ಮುಂದಾಗುತ್ತಿದ್ದಂತೆ, ಸಭಾಪತಿ ಪ್ರತಾಪ್ ಚಂದ್ರ ಶೆಟ್ಟಿ ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

ಈ ವಿಚಾರದಲ್ಲಿ ಬಿಜೆಪಿ-ಕಾಂಗ್ರೆಸ್ ಮಧ್ಯೆ ಸೈದ್ಧಾಂತಿಕ ಸಂಘರ್ಷ ಸೃಷ್ಟಿಯಾಗಿದೆ. ಕಾಯಿದೆ ಜಾರಿಗೆ ಸುಗ್ರೀವಾಜ್ಞೆ ಹೊರಡಿಸಲು ಬಿಜೆಪಿ ಸರಕಾರ ಚಿಂತಿಸುತ್ತಿದೆ. ಈ ನಡುವೆ, ವಿಧಾನ ಸಭೆಯಲ್ಲಿ ಗೋ ಹತ್ಯೆ ನಿಷೇಧ ವಿಧೇಯಕ ಅಂಗೀಕಾರ ಆದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಬಿಜೆಪಿ ಮತ್ತು ಸಂಘ ಪರಿವಾರದ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.



ಸಚಿವ ಎಸ್.ಟಿ. ಸೋಮಶೇಖರ್ ರಾಜ್ಯ ಬಿಜೆಪಿ ಕಚೇರಿಯಲ್ಲಿ ಗೋಪೂಜೆ ಮಾಡಿದರು.

### ಕಾಂಗ್ರೆಸ್ ತಿರುಗೇಟು

ವಿಧಾನಸಭೆಯಲ್ಲಿ ಬುಧವಾರ ಬಿಜೆಪಿ ತಂತ್ರದಿಂದ ದಂಗಾಗಿದ್ದ ಕಾಂಗ್ರೆಸ್, ಗುರುವಾರ ಬೆಳಗ್ಗೆ ಶಾಸಕಾಂಗ ಪಕ್ಷದ ಸಭೆ ಕರೆದಿತ್ತು. ವಿಧಾನ ಪರಿಷತ್‌ನಲ್ಲಿ ಬಿಜೆಪಿಗೆ ತಕ್ಕ ಪಾಠ ಕಲಿಸುವ ಮಾರ್ಗದ ಬಗ್ಗೆ ಚರ್ಚೆ ನಡೆಸಲಾಗಿತ್ತು. ರಾತ್ರಿ 7.15ರವರೆಗೂ ಬೇರೆ ಬೇರೆ ಕಾರ್ಯಕಲಾಪಗಳಿಗೆ ಅವಕಾಶ ನೀಡಿದ ಸಭಾಪತಿ, ನಂತರ ಕಲಾಪ ಮುಂದೂಡಿದರು. ಹೀಗಾಗಿ ಗೋಹತ್ಯೆ ನಿಷೇಧ ವಿಧೇಯಕ ಮಂಡಿಸಲು ಬಿಜೆಪಿಗೆ ಅವಕಾಶ ಸಿಗದೆ ಹೋಯಿತು.

ಈ ಹಿಂದೆ ನಮ್ಮ ಸರಕಾರವಿದ್ದಾಗ ಉಭಯ ಸದನಗಳಲ್ಲಿ ಗೋಹತ್ಯೆ ನಿಷೇಧ ವಿಧೇಯಕ ಅಂಗೀಕಾರಗೊಂಡಿದ್ದರೂ ಕೇಂದ್ರದ ಪ್ರಭಾವ ಬಳಸಿ ರಾಜ್ಯಪಾಲರು ಅಂಗೀಕಾರ ನೀಡದಂತೆ ನೋಡಿಕೊಂಡರು. ಹಾಗಾದರೆ ಕಾಂಗ್ರೆಸ್ ಅಂದು ಮಾಡಿದ್ದು ಪ್ರಜಾಪ್ರಭುತ್ವದ ಪಾಲನೆಯಾ? ಅಂದು ನಮಗೆ ಮಾಡಿದ ಅಪಮಾನದ ಸೇಡನ್ನು ಈಗ ತೀರಿಸಿಕೊಂಡಿದ್ದೇವೆ.

**-ಆರ್. ಅಶೋಕ್** ಕಂದಾಯ ಸಚಿವ

ಗೋವುಗಳು ಹೇಗೆ ನಮಗೆ ಪೂಜನೀಯವೋ, ರೈತನೂ ಪೂಜನೀಯವೇ. ಗೋ ರಕ್ಷಣೆ ಪ್ರಯತ್ನದಲ್ಲಿ ರೈತನನ್ನು ಶೋಷಿಸುವುದು ಯಾವ ನ್ಯಾಯ? ರೈತನಿಗೆ ಹೊರೆ ಸೃಷ್ಟಿಸುವ ಜಾನುವಾರುಗಳ ರಕ್ಷಣೆಯನ್ನು ಸರಕಾರವೇ ಮಾಡಬೇಕಲ್ಲವೇ?

**-ಕುಮಾರಸ್ವಾಮಿ** ಮಾಜಿ ಸಿಎಂ

# ಗೋಹತ್ಯೆ ನಿಯಂತ್ರಣ ಕಾಯಿದೆ ಅತಂತ್ರ

» ಮೊದಲ ಪುಟದಿಂದ

'ಸ್ಪೀಕರ್ ಕಚೇರಿ ದುರ್ಬಳಕೆ ಮಾಡಿಕೊಂಡು ಬಿಜೆಪಿ ವಿಧೇಯಕಕ್ಕೆ ಒಪ್ಪಿಗೆ ಪಡೆದಿದೆ' ಎಂದು ಆರೋಪಿಸಿ ಕಾಂಗ್ರೆಸ್ ವಿಧಾನಸಭಾ ಕಲಾಪ ಬಹಿಷ್ಕರಿಸಿತ್ತು. ಆದರೆ 'ಮೇಲ್ಮನೆಯಲ್ಲಿ ಕಾಂಗ್ರೆಸ್ ಪಕ್ಷ ಸಭಾಪತಿ ಕಚೇರಿ ದುರ್ಬಳಕೆ ಮಾಡಿಕೊಳ್ಳುವ ಮೂಲಕ ಸಂವಿಧಾನಿಕ ಸ್ಥಾನಕ್ಕೆ ಅಗೌರವ ತೋರಿದೆ' ಎಂದು ಆರೋಪಿಸಿ ಅವರ ವಿರುದ್ಧ ರಾಜ್ಯಪಾಲರಿಗೆ ದೂರು ಸಲ್ಲಿಸಿದೆ. ಹೀಗಾಗಿ ಇದೇ ಮೊದಲ ಬಾರಿಗೆ ಉಭಯ ಸದನದ ಸಂಖ್ಯಾಬಲದ ಮೂಲಕ ಆಡಳಿತ-ಪ್ರತಿಪಕ್ಷಗಳು ವಿಧೇಯಕ ವಿಚಾರದಲ್ಲಿ ಶಕ್ತಿ ಪ್ರದರ್ಶನ ನಡೆಸಿದಂತಾಗಿದೆ.

ತಮ್ಮ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಯಾಗಿ 14 ದಿನವಾಗಿದ್ದರೂ, ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಮಂಗಳವಾರದವರೆಗೆ ಕಲಾಪ ನಡೆಸಬೇಕೆಂದು ಬಹುಮತದ ಅಭಿಪ್ರಾಯ ವ್ಯಕ್ತವಾಗಿದ್ದರೂ, ಸಭಾಪತಿ ಪ್ರತಾಪ್‌ಚಂದ್ರ ಶೆಟ್ಟಿ ಅವರು ಗೋಹತ್ಯೆ ನಿಷೇಧ ವಿಧೇಯಕ ಮಂಡನೆಗೆ ಅವಕಾಶ ನೀಡದೆ ಕಲಾಪವನ್ನು ಅನಿರ್ದಿಷ್ಟಾವಧಿಯವರೆಗೆ ಮುಂದೂಡಿದ್ದಾರೆ ಎಂದು ಬಿಜೆಪಿ ಆಪಾದಿಸಿದೆ. ಡಿಸಿಎಂ ಲಕ್ಷ್ಮಣ ಸವದಿ, ಪರಿಷತ್ ಮುಖ್ಯ ಸಚೇತಕ ಮಹಾಂತೇಶ್ ಕವಟಗಿಮಠ್ ನೇತೃತ್ವದ ಬಿಜೆಪಿ ನಿಯೋಗ ರಾಜ್ಯಪಾಲರಿಗೆ ದೂರು ಸಲ್ಲಿಸಿದೆ.

**ಉರುಳಿದ ದಾಳ:** ಭೂ ಸುಧಾರಣಾ ಕಾಯಿದೆ [illegible]ದಂತೆ ಪ್ರಮುಖ ವಿಧೇಯಕಗಳ ಜಾರಿ ವಿಚಾರದಲ್ಲಿ ಸಭಾಪತಿ ಅಡ್ಡಿಯುಂಟು ಮಾಡಿದ ಹಿನ್ನೆಲೆಯಲ್ಲಿ 14 ದಿನ ಮುಂಚಿತವಾಗಿಯೇ ಬಿಜೆಪಿ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿತ್ತು. ಬಿಜೆಪಿ ನೀಡಿದ ನೋಟಿಸ್‌ಗೆ ಗುರುವಾರ 14 ದಿನ ಭರ್ತಿಯಾಗಿತ್ತು. ಈ ಹಿನ್ನೆಲೆಯಲ್ಲಿ ಕಲಾಪವನ್ನು ಮಂಗಳವಾರದವರೆಗೂ ನಡೆಸಿ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿ ಹುದ್ದೆಯಿಂದ ಕೆಳಗಿಳಿಸಲು ಬಿಜೆಪಿ ಯೋಜನೆ ರೂಪಿಸಿತ್ತು. ಇದಕ್ಕೆ ಜೆಡಿಎಸ್ ಸಹ ಸ್ಪಂದಿಸಿತ್ತು. ಹೀಗಾಗಿ ಬಿಎಸಿ ಸಭೆಯಲ್ಲಿ ಕಲಾಪ ವಿಸ್ತರಿಸುವ ಬಗ್ಗೆ ಪ್ರಸ್ತಾಪಿಸಲಾಗಿತ್ತು.

ಕಾನೂನು ಸಚಿವ ಮಾಧುಸ್ವಾಮಿ, ಸಭಾನಾಯಕ ಕೋಟ ಶ್ರೀನಿವಾಸ್ ಪೂಜಾರಿ, ಸಚೇತಕ ಮಹಾಂತೇಶ್ ಕವಟಗಿಮಠ್, ಜೆಡಿಎಸ್‌ನ ಬಸವರಾಜ್ ಹೊರಟ್ಟಿ ಸದನ ನಡೆಸಬೇಕೆಂದು ಅಭಿಪ್ರಾಯ ಮಂಡಿಸಿದರು. ಕಾಂಗ್ರೆಸ್‌ನ ಎಸ್.ಆರ್.ಪಾಟೀಲ್ ಹಾಗೂ ನಾರಾಯಣಸ್ವಾಮಿ ಮಾತ್ರ ಕಲಾಪ ಮುಂದೂಡುವಂತೆ ಒತ್ತಾಯಿಸಿದ್ದರು. 'ಕಲಾಪ ನಡೆಸುವುದು ನನ್ನ ವಿವೇಚನಾಧಿಕಾರ' ಎಂದು ಸಭಾಪತಿ ಅಭಿಪ್ರಾಯ ವ್ಯಕ್ತಪಡಿಸಿದಾಗ 'ಸರಕಾರ ಬಯಸಿದರೆ ಸದನ ನಡೆಸಲೇಬೇಕು' ಎಂದು ಮಾಧುಸ್ವಾಮಿ ಸ್ಪಷ್ಟಪಡಿಸಿದ್ದರು. ಆದರೆ ತಮ್ಮ ವಿರುದ್ಧ ಅವಿಶ್ವಾಸ ನಿರ್ಣಯ ಚರ್ಚೆಗೂ ಅವಕಾಶ ನೀಡದ ಸಭಾಪತಿ ಸದನ ಮುಂದೂಡುವ ಮೂಲಕ ಗೋಹತ್ಯೆ ನಿಷೇಧ ಹಾಗೂ ಅವಿಶ್ವಾಸ ನಿರ್ಣಯ ಗೊತ್ತುವಳಿಗೆ ಹಿನ್ನಡೆಯಾಗುವಂತೆ ನೋಡಿಕೊಂಡರು.

**ಬೆಳಗ್ಗೆಯೇ ಪ್ರಸ್ತಾಪವಾಗಿತ್ತು:** ವಿಧಾನಸಭೆಯಲ್ಲಿ ಅಂಗೀಕಾರವಾದ ವಿಧೇಯಕಗಳು ಪರಿಷತ್‌ನಲ್ಲಿ ಬಿದ್ದುಹೋಗುತ್ತಿದೆ. ಗೋಹತ್ಯೆ ಹಾಗೂ ಬಿಬಿಎಂಪಿ ಕಾಯಿದೆ ತಿದ್ದುಪಡಿ ವಿಚಾರದಲ್ಲೂ ಈ ರೀತಿ ಆಗಬಹುದೆಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ವಿಧಾನಸಭೆಯಲ್ಲಿ ಗುರುವಾರ ಬೆಳಗ್ಗೆಯೇ ಕಳವಳ ವ್ಯಕ್ತಪಡಿಸಿದ್ದರು.

''ಭೂಸುಧಾರಣೆ ಸೇರಿದಂತೆ ಮಹತ್ವದ ವಿಧೇಯಕಗಳೂ ವಿಧಾನಸಭೆಯಲ್ಲಿ ಅಂಗೀಕಾರಗೊಂಡರೂ ಪರಿಷತ್ತಿನಲ್ಲಿ ಮುಗ್ಗರಿಸುತ್ತಿದೆ. ಪದೇಪದೆ ಸುಗ್ರೀವಾಜ್ಞೆ ಹೊರಡಿಸುವ ಬಗ್ಗೆ ರಾಜ್ಯಪಾಲರೂ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಗುರುವಾರವೇ ಪರಿಷತ್ ಕಲಾಪವನ್ನು ಸಭಾಪತಿ ಮುಂದೂಡುವ ಅನುಮಾನ ನಮಗಿದೆ. ಹೀಗಾಗಿ ಒಂದು ದಿನ ಮುಂಚಿತವಾಗಿ ವಿಧೇಯಕ ಮಂಡಿಸಿದ್ದೇವೆ,'' ಎಂದು ಮಾಧುಸ್ವಾಮಿ ಸದನದಲ್ಲಿ ಹೇಳಿದ್ದರು.

ಗೋಹತ್ಯೆ ನಿಷೇಧ ವಿಧೇಯಕ ಪರಿಷತ್ತಿನಲ್ಲಿ ಮಂಡನೆಯಾಗಿ ಅಂಗೀಕಾರ ಸಿಗದೇ ಇದ್ದರೆ, ಮತ್ತೆ ವಿಧಾನಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆಯಬಹುದು ಎಂಬ ಲೆಕ್ಕಾಚಾರವನ್ನು ಆಡಳಿತ ಪಕ್ಷ ಹೊಂದಿತ್ತು. ಆದರೆ ಮೊದಲ ಬಾರಿ ಮಂಡನೆಗೆ ಅವಕಾಶ ಸಿಗದೇ ಇರುವುದರಿಂದ ಬಿಜೆಪಿ ಲೆಕ್ಕಾಚಾರ ತಲೆಕೆಳಗಾಗಿದೆ.

**ರಾಜ್ಯಪಾಲರ ಅಂಗಳಕ್ಕೆ**

ಕಲಾಪ ಮುಂದೂಡಿರುವುದು ಅಸಂವಿಧಾನಿಕ ಎಂದು ರಾಜ್ಯಪಾಲರಿಗೆ ಬಿಜೆಪಿ ದೂರಿದೆ. ಈ ಬಗ್ಗೆ ರಾಜ್ಯ ಅಡ್ವೊಕೇಟ್ ಜನರಲ್ ಹಾಗೂ ಕಾನೂನು ತಜ್ಞರ ಜತೆಗೆ ಚರ್ಚೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಅವರು ನಿಯೋಗಕ್ಕೆ ಭರವಸೆ ನೀಡಿದ್ದಾರೆ. ಮಂಗಳವಾರದವರೆಗೆ ಪರಿಷತ್ ಕಲಾಪ ನಡೆಸಲೇಬೇಕು ಎಂದು ಬಿಜೆಪಿ ತಂತ್ರ ರೂಪಿಸಿದೆ.

**ಕಾಂಗ್ರೆಸ್‌ನವರು ಒಮ್ಮೆ ದನ ಕಾಯುತ್ತೇವೆ, ಮತ್ತೊಮ್ಮೆ ಕಡಿಯುವ ಮಾತನಾಡುತ್ತಾರೆ. ಇವರದ್ದು ಯಾವ ಕಾಂಗ್ರೆಸ್ ? ಮಹಾತ್ಮ ಗಾಂಧಿ ಮರೆತ ಕಾಂಗ್ರೆಸ್ಸಾ ಅಥವಾ ದನಗಳ್ಳರ ಪರ ನಿಲ್ಲುವವರ ಕಾಂಗ್ರೆಸ್ಸಾ?**


**-ಸಿ.ಟಿ. ರವಿ** ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

**ಪರಿಷತ್‌ನಲ್ಲಿ ಮಂಡನೆಯಾಗದಿದ್ದರೂ ಗೋಹತ್ಯೆ ನಿಷೇಧ ಕಾಯಿದೆಯನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲೇಬೇಕು. ಈ ಬಗ್ಗೆ ರಾಜ್ಯ ಸರಕಾರದ ಮೇಲೆ ಒತ್ತಡ ಹೇರುತ್ತೇವೆ.**

**-ವಿ. ಸುನೀಲ್ ಕುಮಾರ್** ವಿಧಾನಸಭೆ ಮುಖ್ಯ ಸಚೇತಕ

# ಸಾಮಾಜಿಕ ಭದ್ರತಾ ಯೋಜನೆಗಳು ಯಥಾಸ್ಥಿತಿ

ಕೋವಿಡ್ ಸಂಕಷ್ಟದ ಹೊರತಾಗಿಯೂ ಜನರಿಗೆ ಸಾಮಾಜಿಕ ಭದ್ರತಾ ಯೋಜನೆಗಳನ್ನು ಸರಕಾರ ಮುಂದುವರಿಸಲಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.



ಮೇಲ್ಮನೆಯಲ್ಲಿ 2020-21ನೇ ಆರ್ಥಿಕ ವರ್ಷಕ್ಕೆ ರಾಜ್ಯ ಸಂಚಿತ ನಿಧಿಯಿಂದ 3,320.40 ಕೋಟಿ ರೂ. ವೆಚ್ಚ ಮಾಡುವ 'ಕರ್ನಾಟಕ ಧನವಿನಿಯೋಗ ವಿಧೇಯಕ- 2020'ಕ್ಕೆ ಸದನದ ಒಪ್ಪಿಗೆ ಪಡೆಯುವ ಮುನ್ನ ಅವರು ಈ ಭರವಸೆ ನೀಡಿದರು.

''ಸಂಧ್ಯಾ ಸುರಕ್ಷೆ ಯೋಜನೆಯಡಿ ವೃದ್ಧರಿಗೆ ಮಾಸಿಕ ಪಿಂಚಣಿ ವಿತರಣೆ ನಿಲ್ಲಿಸಲಾಗಿದೆ ಎಂಬ ಪ್ರತಿಪಕ್ಷದ ಆರೋಪವನ್ನು ಅವರು ತಳ್ಳಿಹಾಕಿದರು. ಸರಕಾರಕ್ಕೆ ಹಣಕಾಸಿನ ತೊಂದರೆ ಇದ್ದರೂ ಬಡವರ ಕಲ್ಯಾಣ ಕಾರ್ಯಕ್ರಮಗಳನ್ನು ಮುಂದುವರಿಸಲು ಸಿಎಂ ಸಮ್ಮತಿಸಿದ್ದಾರೆ. ಹೀಗಾಗಿ ಸಾಮಾಜಿಕ ಭದ್ರತೆ ಯೋಜನೆಗಳಡಿ ಬರುವ ಯಾವ ಕಾರ್ಯಕ್ರಮವನ್ನೂ ತಡೆ ಹಿಡಿದಿಲ್ಲ'' ಎಂದು ಸ್ಪಷ್ಟಪಡಿಸಿದರು.

**ಬಾಕಿ ಪಿಂಚಣಿ ಶೀಘ್ರ ಬಿಡುಗಡೆ:** ''ರಾಜ್ಯದಲ್ಲಿ ಸಂಧ್ಯಾ ಸುರಕ್ಷಾ ಸೇರಿದಂತೆ ನಾನಾ ಕಾರ್ಯಕ್ರಮಗಳಡಿ ಒಟ್ಟು 69 ಲಕ್ಷ ಮಂದಿ ಫಲಾನುಭವಿಗಳಿದ್ದಾರೆ. ಕಳೆದ ಅಕ್ಟೋಬರ್‌ವರೆಗೆ 67.5 ಲಕ್ಷ ಮಂದಿಗೆ ಹಣ ಬಿಡುಗಡೆಯಾಗಿದೆ. ಉಳಿದವರ ಹೆಸರು ಅರ್ಧ ಕೈಬೆರಳ ಗುರುತು ಹಾಗೂ ಇನ್ನಿತರ ಕಾರಣಕ್ಕೆ ಹಣ ಸಂದಾಯ ಆಗಿಲ್ಲ. ಒಂದು ತಿಂಗಳೊಳಗೆ ತಾಂತ್ರಿಕ ಸಮಸ್ಯೆ ಇತ್ಯರ್ಥ ಪಡಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸದ್ಯದಲ್ಲೇ ನವೆಂಬರ್, ಡಿಸೆಂಬರ್ ತಿಂಗಳ ಪಿಂಚಣಿ ಬಿಡುಗಡೆ ಮಾಡಲಾಗುವುದು,'' ಎಂದು ಸ್ಪಷ್ಟಪಡಿಸಿದರು. ''ಕೊರೊನಾದಿಂದ ಸರಕಾರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು ನಿಜ. ಈ ಕಾರಣದಿಂದ ಕೆಲ ಇಲಾಖೆಗಳ ಯೋಜನೆಗಳು ನಿಧಾನಗೊಂಡಿವೆ. ಆದರೆ, ಪ್ರಮುಖ ಕಾರ್ಯಕ್ರಮಗಳಿಗೆ ಹಣ ತಡೆ ಹಿಡಿದಿಲ್ಲ'' ಎಂದರು.

...d Pampa Mahakavi Road, Chamarajpet, Bengaluru – 560018 (Ph: 080-40877666, Fax: 080-40877695/696) and printed by him at Fourth Estate Ltd., No.9/10/11-A, 4th Main, Bommasandra Industrial Area, Hosur Road

RNI No. 71683/99